**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಂದುವರಿದ ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರ ಶ್ರೀ ಓ.ಸಿ.ಎನ್ ವಕೀಲರಿಂದ</u>**

10. ದಿಃ 26.02.1992 ರಂದು ನಮ್ಮ ತಂದೆಯ ಹೆಸರಿಗೆ ಹಕ್ಕು ಪತ್ರ ನೀಡಿದ ಮೇಲೆ ಸದರಿ ಸ್ವತ್ತನ್ನು ಅವರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಯಾವ ವರ್ಷದಲ್ಲಿ ಖಾತೆ ಬದಲಾವಣೆಯಾಗಿರುತ್ತದೆ ಎಂದು ನೆನಪಿಲ್ಲ. ಸರ್ಕಾರದಿಂದ ನಮ್ಮ ತಂದೆಗೆ ಹಕ್ಕು ಪತ್ರ ನೀಡಲಾಗಿತ್ತು ಅವರು ತೀರಿಕೊಂಡ ಮೇಲೆ ನಮ್ಮ ತಾಯಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಸದರಿ ಹಕ್ಕು ಪತ್ರದ ಮೂಲಕ ನೇರವಾಗಿ ನನ್ನ ತಾಯಿ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರತೆ. ಯಾವ ವರ್ಷದಲ್ಲಿ ನನ್ನ ತಾಯಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದರು ಎಂದು ನೆನಪಿಲ್ಲ. ಸುಮಾರು 6-7 ವರ್ಷದಿಂದ ಸದರಿ ಸ್ವತ್ತು ನನ್ನ ತಾಯಿ ಹೆಸರಿನಲ್ಲಿ ಇರುತ್ತದೆ. ನನ್ನ ತಾಯಿ ಸುಮಾರು 4 ವರ್ಷಗಳ ಹಿಂದೆ ಇ-ಸ್ವತ್ತು ಮಾಡಲು ಅರ್ಜಿ ನೀಡಿದ್ದು ಇನ್ನು ಸದರಿ ಇ-ಸ್ವತ್ತು ಅವರ ಹೆಸರಿಗೆ ಆಗಿರುವುದಿಲ್ಲ. ಯಾವ ಕಾರಣಕ್ಕಾಗಿ ನನ್ನ ತಾಯಿಯ ಹೆಸರಿಗೆ ಇ-ಸ್ವತ್ತು ಆಗಿರುವುದಿಲ್ಲ ಎಂದು ನಾನು ತಿಳಿದುಕೊಂಡಿರುವುದಿಲ್ಲ.

11. ಹಕ್ಕು ಪತ್ರದ ಆಧಾರದ ಮೇಲೆ ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ದಾಖಲೆ ದಾವಾ ಸ್ವತ್ತಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಹಕ್ಕು ಪತ್ರದ ಆಧಾರದ ಮೇಲೆ ನನ್ನ ತಾಯಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 2015-16 ರಲ್ಲಿ ಡಿಸಿಬಿ ರಿಜಿಸ್ಟರ್ ಪ್ರತಿಗಳನ್ನು ನೀಡುವ ಅಧಿಕಾರ ಗ್ರಾಮಪಂಚಾಯಿತಿಗೆ ಇರಲಿಲ್ಲ, ಇ-ಸ್ವತ್ತನ್ನು ಮಾತ್ರ ನೀಡಬಹುದಿತ್ತು ಎಂದರೆ ಗೊತ್ತಿಲ್ಲ. ಆದುದರಿಂದ ನಿಪಿ 2 ನ್ನು ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

12. ಚನ್ನಕೇಶವ (3 ನೇ ಪ್ರತಿವಾದಿ) ನನಗೆ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಮ್ಮ ಮತ್ತು ಚನ್ನಕೇಶವನ ಕುಟುಂಬದ ಮಧ್ಯೆ ಯಾವುದೇ ಮಾತುಕತೆ ಹಾಗೂ ವ್ಯವಹಾರಗಳು ಆಗಿರುವುದಿಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ಷರೀಕಾಗಿ ಪಾಲುವಿಭಾಗ ಮಾಡಿಕೊಡುತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. 3 ನೇ ಪ್ರತಿವಾದಿ ನಮ್ಮ ಊರಿನವ ಎಂದರೆ ಸರಿ. ಅವರಿಗೆ ಒಂದು ಗಂಡು 3 ಹೆಣ್ಣು ಮಕ್ಕಳು ಇರುತ್ತವೆ. ಈಗ ಅವರು ಗೋಣೂರಿನಲ್ಲಿ ಅವರ ಸ್ವಂತ ಮನೆಯಲ್ಲಿ ವಾಸಿಸುತ್ತಾರೆ. 3 ನೇ ಪ್ರತಿವಾದಿಗೆ ಗೋಣೂರಿನಲ್ಲಿ ಸ್ವಂತ ಮನೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಈಗಲೂ ತಮ್ಮ ಹೆಂಡತಿ ಮಕ್ಕಳೊಂದಿಗೆ ಮಾವನ ಮನೆಯಲ್ಲಿ ವಾಸಿಸುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಗೋಣೂರಿನಲ್ಲಿ ಸ್ವಂತ ಮನೆ ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯವರ ಮನೆಯ ಖಾತಾ ನಂಬರ್ ಹೇಳಲು ಬರುವುದಿಲ್ಲ.

13. ಈ ದಾವೆ ಹೂಡಿದ ಮೇಲೆ 3 ನೇ ಪ್ರತಿವಾದಿ ನನ್ನ ವಿರುದ್ದ ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ದಾವಾ ಸ್ವತ್ತಿನಲ್ಲಿ ಲಾರಿಗಳ ಮೂಲಕ ತಿಪ್ಪೇಯನ್ನು ತುಂಬುತ್ತಿದ್ದರು ಎಂದರೆ ಸರಿ. 3 ನೇ ಪ್ರತಿವಾದಿಯು ಅವರಿಗೆ ಸೇರಿದ ಜಾಗದಲ್ಲಿ ನಾನು ಲಾರಿಗಳ ಮೂಲಕ ತಿಪ್ಪೇಯನ್ನು ತುಂಬುತ್ತಿದ್ದೆ ಎಂದು ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದೂರಿನ ಆಧಾರದ ಮೇಲೆ ಗ್ರಾಮಾಂತರ ಪೊಲೀಸರು ನ್ಯಾಯಾಲಯದಲ್ಲಿ ಸದರಿ ಗಲಾಟೆಯನ್ನು ಬಗೆಹರಿಸಿಕೊಳ್ಳಲು ಹೇಳಿರುತ್ತಾರೆ ಎಂದರೆ ಸರಿ.

14. ಗ್ರಾಮದ ಸ್ಥಳೀಯರಿಗೆ ಮತ್ತು ನಿವೇಶನ ರಹಿತರಿಗೆ ಮಾತ್ರ ಹಕ್ಕು ಪತ್ರ ನೀಡಲಾಗುತ್ತದೆ ಎಂದರೆ ಸರಿ. ಗ್ರಾಮ ಠಾಣಾಕ್ಕೆ ಸೇರಿರುವ ಜಾಗಗಳಲ್ಲಿ ಮಾತ್ರ ಹಕ್ಕು ಪತ್ರ ನೀಡಲಾಗುತ್ತದೆ, ಖಾಸಗಿ ಜಾಗಗಳಿಗೆ ನೀಡಲಾಗುವುದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಸದರಿ ಜಾಗ ಗ್ರಾಮ ಠಾಣಾದಲ್ಲಿ ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಬೇರೆ ಬೇರೆ ಬಣ್ಣದ ಶಾಹಿಗಳನ್ನು ಬಳಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಬರೆದಿರುವ ದಿನಾಂಕ ಹಾಗೂ ನಿವೇಶನದ ವಿವರಗಳಲ್ಲಿ ಬೇರೆ ಬೇರೆ ಬಣ್ಣದ ಶಾಹಿ ಬಳಸಲಾಗಿದೆ ಎಂದರೆ ಸರಿ. ನಿಪಿ 1 ನ್ನು ನಾವೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

15. ದಾವಾ ಸ್ವತ್ತು ನಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ26.02.1992 ರಲ್ಲಿ ನಮ್ಮ ತಂದೆಯ ಹೆಸರಿಗೆ ಹಕ್ಕು ಪತ್ರದ ಮೂಲಕ ಮಂಜೂರಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ರಿಂದ 3 ನೇ ಪ್ರತಿವಾದಿಗಳು ಷರೀಕಾಗಿ ನನಗೆ ಬರುವ ಹಕ್ಕನ್ನು ತಪ್ಪಿಸುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ 3 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ದಿಃ 24.01.1992 ರಲ್ಲಿ 3 ನೇ ಪ್ರತಿವಾದಿಯವರಿಗೆ ಗ್ರಾಮ ಠಾಣಾದಿಂದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಪತ್ರ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸ್ಥಳೀಯ ಇರುವುದರಿಂದ ಮತ್ತು ವಸತಿ ರಹಿತನಾಗಿರುವುದರಿಂದ ಆತನಿಗೆ ದಾವಾ ಸ್ವತ್ತನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಸ್ಥಳೀಯರು ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಗೋಣೂರಿನಲ್ಲಿ 3-4 ನಿವೇಶನಗಳು ಹಾಗೂ ಮನೆಗಳು ಇರುವುದರಿಂದ ಹಕ್ಕು ಪತ್ರ ಪಡೆಯುವ ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ಹಕ್ಕು ಪತ್ರದ ಆಧಾರದ ಮೇಲೆ ನಮ್ಮ ತಂದೆಯ ಹೆಸರಿಗೆ ಖಾತೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ಮೇಲೆ ನನ್ನ ತಾಯಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಷರೀಕಾಗಿ ನಮಗೆ ಸೇರಿದ ಜಾಗದಲ್ಲಿ ಮನೆ ಕಟ್ಟಲು ಪ್ರಯತ್ನಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ದಿಃ 24.01.1992 ರಿಂದ 3 ನೇ ಪ್ರತಿವಾದಿಯವರು ದಾವಾ ಸ್ವತ್ತಿನಲ್ಲಿ ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಗುಡಿಸಲು ಬಿದ್ದು ಹೋದ ಮೇಲೆ ಅವರು ತಮ್ಮ ಹೆಂಡತಿ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಾದ ಮೇಲೆ ನಾನು ಹಾಗೂ 1 ನೇ ವಾದಿ ಮತ್ತು 1 ಮತ್ತು 2 ನೇಪ್ರತಿವಾದಿಗಳು ದಾವಾ ಸ್ವತ್ತನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ ಎಂದು ಗೊತ್ತಿದ್ದರೂ ಕೂಡ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಹಾಗೂ ಹಾಜರಿರುವುದಿಲ್ಲ ಆದುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ